ಚೋಳನಾಯಕನಹಳ್ಳಿಯ ವ್ಯಾಪ್ತಿಗೆ ಬರುವ ಗ್ರಾಮಗಳ ಎನ್. ಓ. ಸಿ. ಬಗ್ಗೆ.

೨೦೬. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) ಮಾನ್ಯ ಕಂದಾಯ ಮಂತ್ರಿ, ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯಕನಹಳ್ಳಿಯ (ಪಂಚಾಯಿತಿ) ವ್ಯಾಪ್ತಿಗೆ ಬರಲಿರುವ ಗ್ರಾಮಗಳಲ್ಲಿ ನೀಡಲಾಗಿರುವ ಆಕ್ಷೇಪಣಾರಹಿತ ಪತ್ರ (ಎನ್.ಓ.ಸಿ.)ಗಳ ಒಟ್ಟು ಸಂಖ್ಯೆ ಎಷ್ಟು (ಇಟ್ಟಿಗೆ ಗೂಡು, ಮನೆ ಕಟ್ಟಿಡದ ಬಾಬ್ತು, ವಿದ್ಯುತ್ ದೀಪಗಳು, ಮುಂತಾದವುಗಳಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನೀಡುವುದು),

ಆ) ಯಾವ ಆಧಾರದ ಮೇರೆಗೆ ಸದರಿ ಕೆಲಸಗಳಿಗಾಗಿ ಆಕ್ಷೇಪಣಾರಹಿತ ಪತ್ರಗಳನ್ನು ನೀಡಲಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಚೋಳನಾಯಕನಹಳ್ಳಿ ಪಂಚಾಯಿತಿ ಪತಿಯಿಂದ ಕಳೆದ ಮೂರು ವರ್ಷಗಳಿಂದ ೨೯ ಆಕ್ಷೇಪಣಾರಹಿತ (ಎನ್. ಓ. ಸಿ.) ಪತ್ರಗಳನ್ನು ನೀಡಲಾಗಿದೆ.

೧.	ಇಟ್ಟಿಗೆ ಗೂಡು ಕಟ್ಟುವ ಬಗ್ಗೆ ಎನ್. ಓ. ಸಿ.	...	ನೀಡಲಾಗಿಲ್ಲ.
೨.	ಮನೆ ಕಟ್ಟಿಡ	...	ನೀಡಲಾಗಿಲ್ಲ.
೩.	ವಿದ್ಯುತ್ ದೀಪ	...	೬ (ಆರು ಮಾತ್ರ)
೪.	ಅಂಗಡಿಗಳು (ಜನರಲ್ ಲೈಸೆನ್ಸ್)	...	೨೩ (ಇಪ್ಪತ್ತ್ಮೂರು)

ಆ) ಪಂಚಾಯಿತಿಯಲ್ಲಿರುವ ದಾಖಲೆಗಳ ಆಧಾರದ ಮೇರೆಗೆ ಮತ್ತು ಸಾರ್ವಜನಿಕರ ಒಪ್ಪಿಗೆ (ಮಹಜರ್) ಮೇರೆಗೆ ಈ ಆಕ್ಷೇಪಣಾರಹಿತ ಪತ್ರಗಳನ್ನು ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯಿಲ್ಲದೆ ಇರುವ ಕುರಿತಂ

೨೨೮. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಲಪ್ತ ಸಮಯಕ್ಕೆ ಮಳೆ ಬಾರದೆ ರೈತರ ಬೆಟ್ಟು ಗದ್ದೆ (ಮಳೆ ಬಂದರೇನೇ ಸಾಗುವಳಿ ಆಗುವ ಗದ್ದೆಗಳು) ಗಳಲ್ಲಿ ಸಂಪೂರ್ಣ ನಾಶವಾಗಿದ್ದೇ ಅಲ್ಲದೆ ಅಡಿಕೆ, ತೆಂಗು ಇನ್ನಿತರ ಬೆಳೆಗಳು ಕೂಡಾ ನಾಶವಾಗಿರುವುದರಿಂದ ರೈತರು ಕಷ್ಟ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ದಕ್ಷಿಣ ಕನ್ನಡ ಜಿಲ್ಲೆಯನ್ನು ಬರಪೀಡಿತ ಜಿಲ್ಲೆಯೆಂದು ಘೋಷಿಸಿ ರೈತರಿಗೆ ಸೂಕ್ತ ಪರಿಹಾರ ಒದಗಿಸಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು)—

ಅ) ದಕ್ಷಿಣ ಕನ್ನಡ ಜಿಲ್ಲೆಯನ್ನು ಅಭಾವ ಪೀಡಿತವೆಂದು ಗುರುತಿಸಲಾಗಿಲ್ಲ. ಆದಾಗ್ಯೂ, ಮುಂಗಾರಿನ ಮಳೆಯ ಭಾಗಶಃ ವಿಫಲತೆಯಿಂದಾಗಿ, ಸಕಾಲಕ್ಕೆ ಮಳೆಯಾಗದೆ ಕೆಲವು ಸಂದರ್ಭಗಳಲ್ಲಿ ಪರಿಮಿತ ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹ ರೈತರಿಗೆ ಪರ್ಯಾಯ ಬೆಳೆ ತೆಗೆದುಕೊಳ್ಳಲು ಅನುವು ಮಾಡಿ ಕೊಡುವ ಸಲುವಾಗಿ ಕೃಷಿ ಸಾಮಗ್ರಿಗಳನ್ನೊಳಗೊಂಡ ಚೀಲಗಳನ್ನು ಉಚಿತವಾಗಿ ವಿತರಿಸಲು ಹಣ ಬಿಡುಗಡೆ ಮಾಡಲಾಗಿದೆ. ಕುಡಿಯುವ ನೀರಿನ ಅಭಾವ ಕಂಡು ಬಂದಂತಹ ಪಟ್ಟಣ ಹಾಗೂ ಗ್ರಾಮಾಂತರ